ಮಾನ್ಯ ಸದಸ್ಯರು ಮೈಸೂರಿನಲ್ಲಿ ಆಸ್ಪತ್ರೆಯ ಕಟ್ಟಡ ವಿಳಂಬವಾಗಿರುವಂಥದ್ದರ ಬಗ್ಗೆ ಅತ್ಯಂತ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ಆರೋಗ್ಯ ಸಚಿವರ ಜೊತೆಯಲ್ಲಿ ಚರ್ಚಿಸಿ ಶೀಘ್ರವಾಗಿ ಹಣವನ್ನು ಒದಗಿಸಿಕೊಂಡು ಕೆಲಸವನ್ನು ಪ್ರಾರಂಭ ಮಾಡುವಂತಹ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಇ.ಮಾರುತಿರಾವ್ ಪವಾರ್: ಮಾನ್ಯ ಅಧ್ಯಕ್ಷರೇ, ಇದಕ್ಕೆ ಆರೋಗ್ಯ ಸಚಿವರಿಂದ ಏನು ಉತ್ತರ ಬರುತ್ತದೆಂದು ತಿಳಿಸಬೇಕು.

ಅಧ್ಯಕ್ಷರು: ಆರೋಗ್ಯ ಸಚಿವರು ಸದನದಲ್ಲಿದ್ದಾರೆ, ಅವರಿಬ್ಬರು ಸೇರಿಯೇ ಕ್ರಮವನ್ನು ತೆಗೆದುಕೊಳ್ಳುವಂಥದ್ದು. ಅವರಿಬ್ಬರ ಸಂಬಂಧ ಚೆನ್ನಾಗಿದೆ. ಶ್ರೀ ಹೆಚ್.ಸಿ.ಮಹದೇವಪ್ಪನವರ ಪರವಾಗಿ ನಾನೇ ಹೇಳಿದ್ದೇನೆ.

(ಐ) ಕುಣಿಗಲ್‌ನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಷಯದಲ್ಲಿ ಉಪನ್ಯಾಸಕರು ಇಲ್ಲದೇ ಇರುವುದು.

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): 1994-95ರಲ್ಲಿ ಪ್ರಾರಂಭವಾದಂಥ ಕುಣಿಗಲ್‌ನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಣಿಜ್ಯ ವಿಷಯದಲ್ಲಿ ಇದುವರೆಗೂ ಒಬ್ಬ ಉಪನ್ಯಾಸಕರನ್ನೂ ನೇಮಿಸಿರುವುದಿಲ್ಲ. ಕಳೆದ ಮೂರು ದಿವಸಗಳಿಂದ ವಿದ್ಯಾರ್ಥಿಗಳು ಚಳುವಳಿ ಮಾಡುತ್ತಿದ್ದು, ಉಪನ್ಯಾಸಕರುಗಳನ್ನು ತರಗತಿಗಳಿಗೆ ಹೋಗಲು ಬಿಡುತ್ತಿಲ್ಲ. ಅಲ್ಲದೆ ರಸ್ತೆಯಲ್ಲಿ ಬಸ್ಸುಗಳನ್ನು ತಡೆಹಿಡಿಯುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿದೆ. ಈ ಕೂಡಲೇ ಶಿಕ್ಷಣ ಸಚಿವರು ಏನಾದರೊಂದು ವ್ಯವಸ್ಥೆ ಮಾಡದಿದ್ದರೆ ನಾನು ನನ್ನ ಕ್ಷೇತ್ರಕ್ಕೆ ಹೋಗಲು ತೊಂದರೆಯಾಗುತ್ತದೆ. ನಾನು ಧರಣಿ ಮಾಡಬೇಕಾಗುತ್ತದೆ. ತುಮಕೂರಿನಿಂದ ಇಲ್ಲಿಗೆ ಕರೆಸಲು ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು: ನೀವು ಧರಣಿ ಮಾಡುವುದು ಬೇಡ. ಈಗ ಅವರು ಹೈಸ್ಕೂಲು ಮುಗಿಸಿ ಕಾಲೇಜಿಗೆ ಬಂದಿದ್ದಾರೆ. ನಿಮಗೆ ಉತ್ತರ ಹೇಳುತ್ತಾರೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸ್ನೇಹಿತರಾಗಿರತಕ್ಕ ಶ್ರೀ ಮುದ್ದುಹನುಮೇಗೌಡರು ನನ್ನ ಹತ್ತಿರ ಬಂದು 15 ನಿಮಿಷ ಮುಂಚಿತವಾಗಿ ಇದರ ಬಗ್ಗೆ ವಿಷಯ ಹೇಳಿದರು; ಖಂಡಿತ ಒಪ್ಪುತ್ತೇನೆ. ನೀವು ಒಂದು ಪತ್ರ ಬರೆದು ಕೊಡಿ, ಡೆಪ್ಯುಟೇಷನ್ ಮಾಡುವುದಕ್ಕೆ ಅವಕಾಶ ಇದ್ದರೆ ತುಮಕೂರಿನಿಂದ ಡೆಪ್ಯುಟೇಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದೆ. ಈಗ ಶೂನ್ಯವೇಳೆಯಲ್ಲಿ ಪುನಃ ಪ್ರಶ್ನೆ ಕೇಳಿದ್ದಾರೆ. ಅವರಿಗೆ ನಾನು ಏನು ಮೊದಲು ಹೇಳಿದ್ದೆ ಆ ರೀತಿ ತುಮಕೂರಿನಲ್ಲಿ ಏನಾದರೂ ಎಕ್ಸಸ್ ಟೀಚರ್ಸ್

ಇದ್ದರೆ ಕೂಡಲೇ ಅಲ್ಲಿಗೆ ನಿಯೋಜನೆ ಮಾಡುವುದಕ್ಕೆ ಆದೇಶ ಕೊಡುವುದಕ್ಕೆ ಹೇಳುತ್ತೇನೆ.

(ಐ) ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಕೊಲೆ ಪ್ರಕರಣಗಳು

+ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಅಧ್ಯಕ್ಷರೆ, ಕುಂದಾಪುರ ವಿಧಾನಸಭಾಕ್ಷೇತ್ರದಲ್ಲಿ ಕಳೆದ ಕೆಲವು ವರ್ಷಗಳ ಹಿಂದೆ ಆಗಿರತಕ್ಕ ಲಿಲ್ಲಿ ಡಿಸೋಜ, ಮಂಗಳೂರು, ಗುರುರಾಜ ಭಟ್, ಕೋಟೇಶ್ವರ, ಗಣಪ, ಮಡಿವಾಳ ಇವರ ಕೊಲೆ ಪ್ರಕರಣಗಳನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಲಾಯಿತು. ಸಿ.ಒ.ಡಿ ತನಿಖೆ ಯಾವ ಹಂತಕ್ಕೆ ಬಂತು ಎಂಬ ವಿಚಾರ ಇನ್ನೂ ಗೊತ್ತಿಲ್ಲ. ಏಕೆಂದರೆ ನಾವು ಸಿ.ಒ.ಡಿ. ತನಿಖೆಗೆ ಒಪ್ಪಿಸತಕ್ಕ ಮೂಲೋದ್ದೇಶ, ಯಾವುದೇ ರೀತಿಯಲ್ಲಿ ತನಿಖೆಯಾಗಿ ಅಪರಾಧಿಗಳನ್ನು ಪತ್ತೆಹಚ್ಚಬೇಕೆಂಬುದು. ಸಿ.ಒ.ಡಿ. ತನಿಖೆಯಿಂದ ಏನೂ ಪ್ರಯೋಜನವಾಗಿಲ್ಲವೆಂದು ಜನರ ಮನಸ್ಸಿಗೆ ಬಂದಿದೆ. ಏಕೆಂದರೆ ಸಿ.ಒ.ಡಿ ಬಂದರೆ ಮಾತ್ರ ಅಲ್ಲಿ ಕ್ರಮ ಕೈಗೊಳ್ಳುವುದು. ಸಿ.ಒ.ಡಿ.ಯವರು ಬರುತ್ತಾರೆ, ನಾವು ಇಲ್ಲಿ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ ಮೇಲೆ ಹೋಗುತ್ತಾರೆ. ಆನಂತರ ಬರುತ್ತಾರೆ. ಅವರ ಬಗ್ಗೆ ಪ್ರಾಮಾಣಿಕವಾದ ಕಾಳಜಿ ಇಲ್ಲ. ಅದರ ನಂತರ, ಕರಿಯ ಎಂಬ ಹರಿಜನ ಕೊಲೆಯಾಯಿತು. ಅದರ ಬಗ್ಗೆ ಕಳೆದ ಸಾರಿ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದೆ. ಮೊನ್ನೆ 4ನೇ ತಾರೀಕು ಪುಷ್ಪ ಕೋಟಿ ಎಂಬ ಮಹಿಳೆಯ ಕೊಲೆಯಾಯಿತು. ಅದರ ಮೂರನೇ ದಿವಸ 5ನೇ ತಾರೀಖು ಪ್ರಕಾಶ್ ಎಂಬುವವರ ಕೊಲೆಯಾಯಿತು. ಹಾಡುಹಗಲಲ್ಲೆ ಒಂದೂವರೆ ಗಂಟೆ ಸಮಯದಲ್ಲಿ ಕೊಲೆಯಾಯಿತು. ಇವತ್ತಿನವರೆಗೆ ಅಪರಾಧಿಗಳನ್ನು ಪತ್ತೆಹಚ್ಚುವುದಕ್ಕೆ ಆಗಿಲ್ಲ. ಹಾಡುಹಗಲು ಎಲ್ಲರ ಸಮ್ಮುಖದಲ್ಲಿ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲೇ ಆಗಿದೆ. ಆದುದರಿಂದ ಇಂಥ ಪ್ರಕರಣಗಳನ್ನು, ಒಂದು ಕೊಲೆ ಆದಮೇಲೆ ಮತ್ತೊಂದು ಕೊಲೆ ಆಗತಕ್ಕದ್ದನ್ನು ಮುಚ್ಚಿಹಾಕತಕ್ಕ ವ್ಯವಸ್ಥೆ ಆಗಬಾರದು. ಈ ಬಗ್ಗೆ ತಾವು ಏನು ಉದ್ದೇಶ ಇಟ್ಟುಕೊಂಡಿದ್ದೀರಿ? ಪ್ರಾಮಾಣಿಕವಾಗಿ ಕೊಲೆಗಾರರನ್ನು ಬಂಧಿಸತಕ್ಕ ಪ್ರಯತ್ನ ಮಾಡಬೇಕೆಂಬ ಮಾತನ್ನು ಮಾನ್ಯ ಅಧ್ಯಕ್ಷರ ಮೂಲಕ ಹೇಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಸಿ.ಒ.ಡಿ.ಗೆ ಒಪ್ಪಿಸಿರತಕ್ಕ ಪ್ರಕರಣಗಳಲ್ಲಿ ತನಿಖೆ ಮುಂದುವರಿದಿಲ್ಲ, ಅದು ಹಂತವನ್ನು ತಲುಪಿಲ್ಲವೆಂದು ಹೇಳುತ್ತಾರೆ. ನಿಜ, ಸ್ಥಳೀಯವಾಗಿರತಕ್ಕ ಪೊಲೀಸರು ಅದರಲ್ಲಿ ಯಾವ ಸಫಲತೆಯನ್ನು ಕಾಣಲಿಲ್ಲ; ನಾವು ಅದನ್ನು ಸಿ.ಒ.ಡಿಗೆ ಒಪ್ಪಿಸಿದೆವು. ಸಿ.ಒ.ಡಿ.ಗೆ ಒಪ್ಪಿಸಿ ಆದಮೇಲೆ ಅದಕ್ಕೆ ಇರತಕ್ಕ ಒಂದು ಟಾಸ್ಕ್‌ಫೋರ್ಸ್‌ನವರು ನೋಡಿ ಸಿ.ಒ.ಡಿ ಇಲಾಖೆಗೆ ಕಳುಹಿಸುತ್ತಾರೆ. ಅದು ಆದಮೇಲೆ ಒಂದು ಪ್ರಿಲಿಮಿನರಿ ಎನ್‌ಕ್ವೈರಿಗೆ ಬಂದಮೇಲೆ ಅಲ್ಲಿ ಅದನ್ನು